17. ಪ್ರಕಟಣೆಗಳು

ಉಪಾಧ್ಯಕ್ಷರು : (i) ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು, ದಿನಾಂಕ : 8ನೇ ಆಗಸ್ಟ್, 2002 ರಂದು ಕರ್ನಾಟಕ ಕೈಗಾರಿಕೆಗಳ ಸೌಲಭ್ಯ ವಿಧೇಯಕ 2002ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

(ii) ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು, ದಿನಾಂಕ : 8ನೇ ಆಗಸ್ಟ್, 2002 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಈಗ ಸಮಯವಾಗಿದ್ದರೂ ಕೂಡ ಮಾನ್ಯ ಶಿವಾನಂದ ಪಾಟೀಲರು ನಿಯಮ 73ರ ಅಡಿಯಲ್ಲಿ ಗಮನಸೆಳೆಯುವ ಸೂಚನೆ ಕೊಟ್ಟಿದ್ದಾರೆ. "ಭೀಮಾ ನದಿಯಲ್ಲಿ ನೀರು ಭತ್ತಿ ಹೋಗುತ್ತಿರುವ ವಿಚಾರವಾಗಿ ಪ್ರಸ್ತಾಪ ಮಾಡುವವರಿದ್ದಾರೆ."

18. ಗಮನ ಸೆಳೆಯುವ ಸೂಚನೆ

ವಿಷಯ : ಭೀಮಾ ನದಿಯಲ್ಲಿ ನೀರು ಬತ್ತಿ ಹೋಗುತ್ತಿರುವ ವಿಚಾರದ ಬಗ್ಗೆ

+ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ಪ್ರಸ್ತಾಪ ಮಾಡಲು 18 ದಿವಸಗಳ ನಂತರ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಕೃತಜ್ಞತೆಗಳನ್ನು ಮೊದಲಿಗೆ ಸಲ್ಲಿಸುತ್ತೇನೆ. ಭೀಮಾ ನದಿಯು ರಾಜ್ಯದಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂಥ ನದಿಯಾಗಿದೆ. ಅದರಲ್ಲಿ ವಿಶೇಷವಾಗಿ ಕೃಷ್ಣ ಕೊಳದಲ್ಲಿ ಬರತಕ್ಕಂಥ ಬಹಳ ದೊಡ್ಡನದಿ ಎಂದರೂ ನಾರು ಒಪ್ಪಿಕೊಳ್ಳಬೇಕಾಗುತ್ತದೆ. ಈ ನದಿಯು 786 ಕಿಲೋಮೀಟರ್ ವರೆಗೆ ಉದ್ದ ಹರಿಯುತ್ತದೆ. ಇದು ಮಹಾರಾಷ್ಟ್ರದಲ್ಲಿ ಪ್ರಾರಂಭವಾಗಿ ಆಂಧ್ರದಲ್ಲಿ ಮುಕ್ತಾಯವಾಗತಕ್ಕಂಥ ಒಂದು ಪ್ರಾಮುಖ್ಯವಾಗಿರತಕ್ಕಂಥ ನದಿ. ಜೊತೆಗೆ ನದಿಯ ವಿಸ್ತರಣೆಯು ಇಷ್ಟು ದೊಡ್ಡದಿರುವುದು ಮತ್ತು ವಿಶಾಲವಾಗಿರತಕ್ಕಂಥ ನದಿ ನಮ್ಮ ರಾಜ್ಯದ ಮೂರು ಜಿಲ್ಲೆಗಳಿಗೆ ಅಂದರೆ, ಗಡಿನಾಡು ಜಿಲ್ಲೆಗಳಾಗಿರತಕ್ಕಂಥ ಬಿಜಾಪುರ, ಗುಲ್ಬರ್ಗ, ಬೀದರ್‌ಗಳಿಗೆ ಬಹಳ ಪ್ರಮುಖ್ಯವಾಗಿರತಕ್ಕಂಥ ದುರ್ದೈವದಿಂದ ನಮ್ಮ ಬಿಜಾಪುರ ಜಿಲ್ಲೆಯು ಅವಿಭಾಜ್ಯ ಜಿಲ್ಲೆಯಾಗಿ ರತಕ್ಕಂಥ ಸಂದರ್ಭದಲ್ಲಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳು ಸೇರಿತಕ್ಕಂಥ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯನ್ನು ಪಂಜಾಬ್ ಎಂದು ಕರೆಯುತ್ತಿದ್ದೆವು. ಇನ್ನೊಂದು ಕಡೆ ಜನರು ಇದನ್ನು ಬರಗಾಲದ ಜಿಲ್ಲೆಯಂತಲೂ ಕರೆಯುತ್ತಾರೆ. ನಾವು ಎರಡೂ ಖ್ಯಾತಿಗೆ ಪಾತ್ರರಾಗಿದ್ದೇವೆ. ಆದರೆ ಇವೊತ್ತು ನಮ್ಮ ಜಿಲ್ಲೆಯು ಪಂಚನದಿಗಳ ಬೀಡಾಗಿದ್ದರೂ ಕೂಡ ನಮ್ಮ ಜನರಿಗೆ ಕುಡಿಯಲು ನೀರಿಲ್ಲ ಎನ್ನುವ ಒಂದು ಮಾತು ಬಹಳ ನೋವಿನ ಸಂಗತಿಯನ್ನು, ವ್ಯಕ್ತ ಪಡಿಸಬೇಕಾಗುತ್ತದೆ. ನಮ್ಮಲ್ಲಿ ಐದು ನದಿಗಳು ಹರಿದರೂ ಕೂಡ, ತಮಗೆ ಗೊತ್ತಿರುವ ಹಾಗೆ ಬಿಜಾಪುರಕ್ಕೆ ಕೃಷ್ಣ